


**ಎಡದಿಂದ ಬಲಕ್ಕೆ**

1. ನಷ್ಟವನ್ನು ಕಡಿಮೆ ಮಾಡುವ ತಂತ್ರಗಳ ಆಚರಣೆ 4
3. ಮತ್ತೆ ಸಂತೆ ಸೇರುವ ವೇಳೆಗೆ ತಿಂಗಳ ಕೊನೆ ಬಂದೀತು 3
4. ಸಮಸ್ತ ಕೆಲಸಗಳಿಗೂ ಅತ್ಯವಶ್ಯವಾದದ್ದು ತಲೆಯೇ ತಾನೇ? 3
6. ಈ ಬಗೆಯ ಅಡುಗೆಯಲ್ಲಿ ಸಂಪೂರ್ಣ ಮಾಗುವುದೆಂದರೆ? 4
7. ಅಮೂಲ್ಯ ಮಣಿಗಳ ಆಕರ. ಅದೆಂಥ ಸಾಗರ? 4
9. ಗುಸುಗುಸು ನಡೆಯುತ್ತಿರುವುದನ್ನು ನೋಡಿ ಈ ಮಂದಹಾಸವೇ? 4
12. ಹೊಸ ಹೊಸ ವೇಷ ಧರಿಸುವವರ ಒಡನಾಟ ಹೇಗೆ? 4
14. ಮಾಲೆ ತೊಟ್ಟು ಪುನಃ ಬೆಟ್ಟ ಏರಿದ್ದಕ್ಕೆ ಇಷ್ಟೊಂದು ಸೊಕ್ಕು! 3
15. ವಾದ್ಯಗಳನ್ನೆಲ್ಲ ಮೂಲೆಗುಂಪು ಮಾಡಿದರೆಂದು ಇಂಥ ಯಾತನೆ 3
16. ಹದಿನಾಲ್ಕಕ್ಕೆ ಚತುರ್ದಶವಾದರೆ ಹದಿಮೂರಕ್ಕೆ? 4

**ಮೇಲಿನಿಂದ ಕೆಳಕ್ಕೆ**

1. ಆರ್ತನಾದಕ್ಕೆ ಕಿವಿಗೊಡದವರೇ ವಿಪರೀತ ಹೆಚ್ಚು 4
2. ಮುಷ್ಕರ ನಡೆಯದಂತೆ ಮಾಡಿದ್ದಕ್ಕೆ ವಂದನೆ 4
3. ಬದುಕಿನಲ್ಲಿ ಮುಂದುವರಿಯಲು ಒಂದು ಆದರ್ಶ ಬೇಕು 3
5. ಇಂಥ ಕೊಳಕುತನವೇ ಆಕೆಯ ದೊಡ್ಡ ದೋಷ 3
6. ಪಯಣಕ್ಕೆ ಲಾಯಕ್ಕಿಲ್ಲ ಎಂದೊಡನೆ ಓಡಿಹೋಗುವುದೇ? 4
8. ಸುಂದರನಾಗಿದ್ದೂ, ಸರಿದಾರಿಯಲ್ಲಿದ್ದೂ ತಲೆಕೆಳಗಾದ ಯಜಮಾನ 4
10. ಅಲ್ಲಿ ಯಾವ ಬೆಳೆ ಬೆಳೆಸುವುದಕ್ಕೂ ಕಷ್ಟ ಇಲ್ಲ 3
11. ಭಾರೀ ಗೌರವಕ್ಕೆ ಪಾತ್ರನಾದ ಅಧ್ಯಾಪಕರ ಮಗ 4
12. ಸಂಶಯವನ್ನು ಪರಿಹರಿಸಬೇಕಾದ ಸಂದರ್ಭ ಒದಗಿತೇ? 4
13. ಸಹವಾಸವನ್ನೇ ಬದಲಿಸಿದ್ದು ಈ ಕಂಪು 3

---

**01—06—2023 ಉತ್ತರಗಳು**

**ಎಡದಿಂದ ಬಲಕ್ಕೆ**

1. ಅಧಿಪತಿ 3. ನೀರವ 4. ರುಸುಮು 6. ನಿರ್ಧಾರಕ 7. ಸದಾಕಾಲ 8. ನಸುನಗು 10. ನವಕಾವ್ಯ 12. ಪರಿಕರ 14. ಅಮಾಯಕ 16. ನುಸುಳು 17. ವಿಹಾರಿ 18. ಕುಟಿಲತೆ

**ಮೇಲಿನಿಂದ ಕೆಳಕ್ಕೆ**

1. ಅವನಿ 2. ತಿರುಕ 3. ನೀಳಕಾಯ 5. ಮುನಿಸು 7. ಸಮಾಧಾನ 9. ಗುರುತರ 11. ಕಾನೂನು 13. ಸರಿದಾರಿ 14. ಅಳುಕು 15. ಕವಿತೆ

ಪ್ರಶ್ನಾಂಕಣ

## ಅಣಬೆ ವಿಷ: ಇದೆಯೇ ಪ್ರತಿವಿಷ?

ಅಣಬೆ ಅಥವಾ ನಾಯಿಕೊಡೆ (Mushroom). ಅದೊಂದು ಬಗೆಯ ಶಿಲೀಂಧ್ರ (Fungus). ಅಣಬೆಗಳಲ್ಲಿ 14,000 ಪ್ರಭೇದಗಳಿವೆ (ಕೆಲ ಪ್ರಭೇದಗಳು ಚಿತ್ರಗಳಲ್ಲಿವೆ). ಅವುಗಳ ಹಲವಾರು ಪ್ರಭೇದಗಳು ಜಗದಾದ್ಯಂತ ತುಂಬ ಜನಪ್ರಿಯ ಆಹಾರ ಆಗಿವೆ. ಎಷ್ಟೆಂದರೆ ಅವನ್ನು ಕೃಷಿ ಬೆಳೆಯಂತೆ ಬೆಳೆಯಲಾಗುತ್ತಿದೆ ಕೂಡ. ಜಗತ್ತಿನಲ್ಲಿ ಪ್ರತಿವರ್ಷ ಮನುಷ್ಯರು ಆಹಾರವಾಗಿ ಸೇವಿಸುತ್ತಿರುವ ಅಣಬೆ ಪ್ರಮಾಣ 12 ದಶಲಕ್ಷ ಟನ್ ಆಗುವಷ್ಟಿದೆ!

ಆದರೆ, ವಿಪರ್ಯಾಸ ಏನೆಂದರೆ, ಅಣಬೆಗಳಲ್ಲೇ ಕೆಲವಾರು ಪ್ರಭೇದಗಳು ವಿಷಕರವೂ ಆಗಿವೆ. ಅಂತಹ 100 ಪ್ರಭೇದಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಆ ಪೈಕಿ 20 ಪ್ರಭೇದಗಳು ಉಗ್ರ ವಿಷಗಳನ್ನು ಹೊಂದಿವೆ. ಅವುಗಳನ್ನು ಸೇವಿಸಿದವರಿಗೆ ನಿಧಾನವಾಗಿಯಾದರೂ ಅಂಗಾಂಗ ವೈಫಲ್ಯಕ್ಕೆ ಕಾರಣವಾಗುತ್ತದೆ. ತನ್ಮೂಲಕ ಸಾವನ್ನೂ ತರುತ್ತವೆ.

ಇಂತಹ ಉಗ್ರ ವಿಷದ ಅಣಬೆಗಳಲ್ಲೆಲ್ಲ ಅತ್ಯಂತ ಘೋರ ವಿಷದ ಪ್ರಭೇದವೊಂದಿದೆ. ಸೇವಿಸಿದವರಿಗೆ ಖಚಿತ ಮರಣವನ್ನು ತರುವ ಆ ಅಣಬೆಗೆ ಡೆತ್ ಕ್ಯಾಪ್ ಮಶ್ರೂಮ್ ಎಂದು ಅನ್ವರ್ಥ ಹೆಸರನ್ನೇ ಇಡಲಾಗಿದೆ. 15 ಸೆಂ.ಮೀ. ಎತ್ತರಕ್ಕೆ ಬೆಳೆಯುವ, ಹಳದಿ ಹಸುರು ಮಿಶ್ರಿತ ಬಣ್ಣದ, ಅಮಾಯಕ ರೂಪದ, ತುಂಬ ರುಚಿಕರವೂ ಆದ ನಾಯಿಕೊಡೆ ಪ್ರಭೇದ ಇದು. ಈ ಅಣಬೆ ಎಷ್ಟು ವಿಷಕರವೆಂದರೆ ವಿವಿಧ ಅಣಬೆಗಳ ವಿಷದಿಂದ ಪ್ರತಿವರ್ಷ ಪ್ರಾಣ ಬಿಡುತ್ತಿರುವ ನೂರಾರು ಜನರ ಪೈಕಿ ಶೇ. 90ರಷ್ಟು ಜನ ಇದೊಂದೇ ಪ್ರಭೇದಕ್ಕೆ ಬಲಿಯಾಗುತ್ತಿದ್ದಾರೆ! ತಿಂದ ಸ್ವಲ್ಪ ಹೊತ್ತಿನಲ್ಲೇ ತೀವ್ರ ಅಸೌಖ್ಯ ತಂದು, ಮೂರ್ಛೆಗೊಳಿಸಿ, ಅನತಿ ಸಮಯದಲ್ಲೇ ಪಿತ್ತಜನಕಾಂಗವನ್ನು ಸಂಪೂರ್ಣ ನಿಷ್ಕ್ರಿಯಗೊಳಿಸಿ ಈ ಅಣಬೆ ಮೃತ್ಯುವನ್ನು ತರುತ್ತದೆ. ವಿಶೇಷ ಏನೆಂದರೆ, ಇದೇ ಅಣಬೆ ಅರಸರ ಕೊಲೆಗಾರ (Killer of the Kings) ಎಂಬ ಕುಖ್ಯಾತಿಯನ್ನೂ ಗಳಿಸಿದೆ. ಏಕೆಂದರೆ ಕ್ರಿ.ಶ. 54ರಲ್ಲಿ ರೋಮನ್ ಚಕ್ರವರ್ತಿ ಕ್ಲಾಡಿಯಸ್ ಮತ್ತು ಕ್ರಿ.ಶ. 1740ರಲ್ಲಿ ಮತ್ತೊಬ್ಬ ರೋಮನ್ ಚಕ್ರವರ್ತಿ ಚಾರ್ಲ್ಸ್ VI ಇಬ್ಬರೂ ಈ ಅಣಬೆಯನ್ನು ಸೇವಿಸಿಯೇ ಮೃತರಾದದ್ದು!




ವಿಸ್ಮಯ ಏನೆಂದರೆ ಡೆತ್ ಕ್ಯಾಪ್ ಮಶ್ರೂಮ್‌ನಲ್ಲಿರುವ ಘೋರ ವಿಷ ಆಲ್ಫಾ ಅಮಾನಿಟಿನ್‌ಗೆ ಈವರೆಗೂ ಯಾವುದೇ ಔಷಧ ಇರಲಿಲ್ಲ. ಆದರೆ ಈಗ ಕೆಲವೇ ವಾರಗಳ ಹಿಂದೆ ಸಂಶೋಧಕರು ಆಲ್ಫಾ ಅಮಾನಿಟಿನ್ ಅನ್ನು ನಿಷ್ಕ್ರಿಯಗೊಳಿಸಬಲ್ಲ ಪ್ರತಿವಿಷ (Antidote) ಒಂದನ್ನು ಪತ್ತೆ ಹಚ್ಚಿದ್ದಾರೆ. ಇಂಡೋಸಯಾನಿನ್ ಗ್ರೀನ್ ಎಂಬ ಆ ಜೀವರಕ್ಷಕ ಔಷಧ ರಾಸಾಯನಿಕದ ಶೋಧದ ವರದಿ ವಿಶ್ವ ಪ್ರತಿಷ್ಠಿತ ವಿಜ್ಞಾನ ಪತ್ರಿಕೆ ನೇಚರ್ ಕಮ್ಯೂನಿಕೇಷನ್‌ನಲ್ಲಿ (16 ಮೇ, 2023) ಪ್ರಕಟವಾಗಿದೆ. ಈ ಶೋಧ ಔಷಧ ವಿಜ್ಞಾನ ಕ್ಷೇತ್ರದ ಒಂದು ಮಹಾನ್ ಸಾಧನೆಯಾಗಿದೆ.

■ ಎನ್. ವಾಸುದೇವ್